ವಾಗಿದೆ. ಏನೇ ಸ್ಟ್ಯಾಂಡರ್ಡ್ ಪಬ್ಲಿಕ್ ಪರೀಕ್ಷೆ ರದ್ದು ಮಾಡಿದ್ದು ಸರಿಯೋ ಅಥವಾ ತಪ್ಪೋ ಎಂಬ ಬಗ್ಗೆ ನಾನು ಈಗ ಏನೂ ಹೇಳುವುದಿಲ್ಲ. ಆದರೆ ಈಗ ಬಂದಿರುವ ಸಮಸ್ಯೆಯನ್ನು ಸರ್ಕಾರ ಯಾವ ರೀತಿ ಬಗೆಹರಿಸುತ್ತದೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ?

ಶ್ರೀ ಜಿ. ಬಿ. ಶಂಕರ್‌ರಾವ್.—ಇಲ್ಲಿರುವಂತಹ ಪ್ರಶ್ನೆ ಏನೆಂದರೆ, ಒಳ್ಳೆಯ ಹೆಸರು ಪಡೆದಿರುವಂತಹ ಶಾಲೆಗಳಿಗೆ ಸೆ ರಿ ಕಂಡು ಪ ಡುಗರು ಇಷ್ಟಪಡುತ್ತಿರ ಸ ಕಾರಣದಿಂದ ಅಲ್ಲಿ ಅವಿಗೆ ಅಡ್ಮಿಷನ್ ಸಿಗುತ್ತಿಲ್ಲ. ಇಂಥವುಗಳಿಗೆ ಬೇರೆ ಶ ಲೆ ಳಿಗೆ ಹೊಸದಾಗಿ ತೆರೆಯುವ ಸಂಬಂಧದಲ್ಲಿ ಪರಿಶೀಲನೆ ಮಾಡುತ್ತೇವೆ. ಮತ್ತು ಎಲ್ಲ ಮಕ್ಕಳಿಗೂ ಅಡ್ಮಿಷನ್ ಕೊಡಿಸುವುದಕ್ಕೆ ನಮಗೆ ಯಾವ ತೊಂದರೆಯೂ ಆಗುವುದಿಲ್ಲ. ಕೊಡಿಸುತ್ತೇವೆ. ಇದರ ಜೊತೆಗೆ ಹೊಸದಾಗಿ ೭೦೦ ಜನ ಶಿಕ್ಷಕರನ್ನು ನೇಮಕ ಮಾಡಿಕೆ ಳ್ಳಲು ನಾವು ಆದೇಶ ಕೊಟ್ಟಿದ್ದೇವೆ ಮತ್ತು ಮಂಜೂರಾತಿ ಸಹ ಕೊಟ್ಟಿದ್ದೇವೆ. ಇಷ್ಟೆಲ್ಲಾ ನಾವೇ ಆರ್ಡರ್‌ಮೆಂಟ್ ಆರ್ಡರನ್ನು ಪ್ರತ್ಯೇಕವಾಗಿ ಕೊಡುವುದಕ್ಕಾಗುವುದಿಲ್ಲ : ಸಂಬಂಧಪಟ್ಟ ಅಧಿಕಾರಿಗಳು ಕೊಡುತ್ತಾರೆ. ಪೆಡ್‌ಗಳನ್ನು ಕಟ್ಟಿಸಲು ಜಿಲ್ಲಾಧಿಕಾರಿಗಳ ಹತ್ತಿರ ಹಣ ಇಟ್ಟಿದ್ದೇವೆ. ಅದನ್ನು ಉಪಯೋಗ ಮಾಡಿಕೊಳ್ಳಿ ಎಂದೂ ಸಹ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ ಒಟ್ಟಿನಲ್ಲಿ ಹೇಳಬೇಕೆಂದರೆ, ಮಾನ್ಯ ಸದಸ್ಯರಿಗೆ ಇರುವಷ್ಟೇ ಕಳಕಳಿ, ವಿವೇಚನೆ ಸರ್ಕಾರಕ್ಕೂ ಇದರ ಬಗ್ಗೆ ಇದೆ. ಆದಕಾರಣ ನಾವು ಒಂದೂಕಾಲು ತಿಂಗಳ ಹಿಂದೆಯೇ ಈ ಬಗ್ಗೆ ಆಜ್ಞೆ ಹೊರಡಿಸಿದ್ದೇವೆ. ಇದರ ಮೇಲೆ ಸರ್ಕಾರಕ್ಕೆ ವರದಿಗಳು ಬರುತ್ತಿವೆ. ಆ ವರದಿಗಳ ಆಧಾರದ ಮೇಲೆ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

SRI P K. RANGANATHAN.—He is a responsible Minister. I would like to know whether he has visited any one of the High Schools to verify what the Officers have said is a fact or not ?

SRI G. B. SHANKAR RAO.—Reports are there.

SRI P. K. RANGANATHAN.—I would like to know whether he has taken any interest in this regard ? Has he visited any one of these Schools to know what the Officers have said is correct or not ?

ಶ್ರೀ ಜಿ. ಬಿ. ಶಂಕರ್‌ರಾವ್.—ಸ್ವಾಮಿ, ಈಗ ನಾವು ಸ್ಕೂಲ್ ಟೀಚರ್ ಆಗಬೇಕಾಗಿದೆ. ನಮ್ಮ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ಸ್ ಇದ್ದಾರೆ ; ಅವರು ನಿನ್ನೆಯ ದಿನವೆ ಮಾನಿರೆಡ್ಡಿ ಜಾಗ್ಯದಲ್ಲಿ ಒಂದು ಸ್ಕೂಲಿಗೆ ಹೋಗಿ ಇನ್ಸ್‌ಪೆಕ್ಟ್ ಮಾಡಿಕೊಂಡು ಬಂದಿದ್ದಾರೆ. ರಾಜ್ಯದಲ್ಲಿರತಕ್ಕಂಥ ೨೦,೪೦೦ ಸ್ಕೂಲ್‌ಗಳಿಗೆ ಹೋಗಿ ನಾವು ಇನ್ಸ್‌ಪೆಕ್ಟ್ ಮಾಡಬೇಕು ಎಂದರೆ ಅದು ಅಸಾಧ್ಯವಾದ ಮಾತು. ಇದಕ್ಕಾಗಿಯೇ ಇನ್ಸ್‌ಪೆಕ್ಟರ್‌ನ್ನು ನಾವು ನೇಮಕ ಮಾಡಿದ್ದೇವೆ. ಅವರ ಸಂಬಳ ಸಾರಿಗೆಗಾಗಿ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅವರು ಈ ವಿಷಯದಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನೂ ಕೂಡ ಹೋಗಿ ನೋಡಿದ್ದೇನೆ. ಅಂತಹದ್ದೇನೂ ಇದರಲ್ಲಿ ಕಂಡುಬಂದಿಲ್ಲ. ಇಷ್ಟಕ್ಕೆ ನಾನು ಇದನ್ನು ಸಾಕು ಮಾಡುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರಾದ ಪಿ. ಎನ್. ರೆಡ್ಡಿಯವರ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

CALLING ATTENTON TO MATTERS OF URGENT PUBLIC IMPORTANCE

re:—*Inconvenience caused to the fruits and Vegetable co-operative Societies Bangalore Dist.*

SRI P. N. REDDY.—I call the attention of the Minister of State for Horticulture and Prisons to the inconvenience caused to the fruits and vegetable co operative societies in Kolar and Bangalore Districts.

SRI K. YENKATAPPA (Minister of State for Horticulture and Prisons).—I wills to make the following Statement.

ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ಹನ್ನೆರಡು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ, ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಯೋಗ್ಯ ಬೆಲೆ ದೊರಕಿಸಿಕೊಡಲು ಮತ್ತು ಮಧ್ಯಮವರ್ಗಗಳನ್ನು ದೂರಮಾಡಿ ನೇರವಾಗಿ ಗ್ರಾಹಕರಿಗೆ ಸುಲಭ ದರದಲ್ಲಿ ಹಣ್ಣು ಮತ್ತು ತರಕಾರಿಗಳನ್ನು ಒದಗಿಸುವ ಉದ್ದೇಶದಿಂದ, ೧೦೧ ಪ್ರಾಥಮಿಕ ಸಹಕಾರ ಸಂಘಗಳನ್ನು ಸ್ಥಾಪಿಸುವ ತೀರ್ಮಾನ ಕೈಗೊಳ್ಳಲಾಯಿತು. ಈ ಯೋಜನೆಗೆ ಸಂಬಂಧಿಸಿದಂತೆ, ೮ ಕಿ.ಮೀ. ವ್ಯಾಪ್ತಿ ಇರುವ ಸಹಕಾರಿ ಸಂಘಗಳು ೧೦೧ ಪಂತ್ತು ಇವುಗಳಿಗೆ ಮಾರ್ಗ ಸೂಚನೆ ನೀಡಲು ಈ ಸಹಕಾರ ಸಂಘಗಳ ಒಕ್ಕೂಟವನ್ನು ರಚಿಸುವುದು. ಮತ್ತು ಈ ಸಂಘಗಳ ಮೂಲಕ ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವುದು, ಗ್ರಾಹಕರಿಗೆ ಹಣ್ಣು, ತರಕಾರಿಗಳನ್ನು ಯೋಗ್ಯ ದರದಲ್ಲಿ ಪೂರೈಸಲು ೧೦೧ ಮಾರಾಟ ಕೇಂದ್ರಗಳನ್ನು ಸ್ಥಾಪಿಸುವುದು, ಶೀತಾಗಾರಗಳನ್ನು ಸ್ಥಾಪಿಸುವುದು, ಬೆಳೆದ ಪದಾರ್ಥಗಳನ್ನು ಸಂಗ್ರಹಿಸಲು ಸಾಗಣೆ ಸೌಲಭ್ಯವನ್ನು ಒದಗಿಸುವುದು, ಬೆಳೆದ ಹಣ್ಣು ತರಕಾರಿಗಳನ್ನು ದಿವಾರಾ ಆಯ್ಕೆ ಮಾಡಿ ಬೆಲೆ ನಿಗಧಿ ಮಾಡುವುದು, ಉತ್ತಮ ಬೀಜ, ಗೊಬ್ಬರ ಹಾಗೂ ಕ್ರಿಮಿನಾಶಕಗಳ ಪೂರೈಕೆ, ಪ್ರಾಥಮಿಕ ಸಂಘಗಳಿಗೆ ಮತ್ತು ಒಕ್ಕೂಟಕ್ಕೆ ಧನ ಸಹಾಯ ನೀಡುವುದು ಇತ್ಯಾದಿ ಉದ್ದೇಶಗಳಿಂದ ಈ ಯೋಜನೆಯನ್ನು ರೂಪಿಸಲಾಗಿದೆ.

೨. ಈ ಯೋಜನೆ ೧೨೩೭ ಹಳ್ಳಿಗಳಲ್ಲಿನ ೧೯,೦೬೯ ಹೆಕ್ಟೇರು ಹಣ್ಣು ಮತ್ತು ತರಕಾರಿ ಕ್ಷೇತ್ರಗಳ ನ್ನೊಳಗೊಂಡಿರುತ್ತದೆ. ಪ್ರತಿ ಸಹಕಾರ ಸಂಘವೂ ಯಶಸ್ವಿಗಾಗಿ ಕಾರ್ಯ ನಿರ್ವಹಿಸಲು ತಿಂಗಳಿಗೆ ಕನಿಷ್ಟ ಹತ್ತು ಸಾವಿರ ರೂ. ಗಳ ಬೆಳೆಯನ್ನು ಮಾರಾಟಕ್ಕೆ ಒದಗಿಸುವ ವ್ಯವಸ್ಥೆ ಮಾಡಬೇಕಾಗಿರುತ್ತದೆ. ಈ ಉದ್ದೇಶಕ್ಕಾಗಿ ೧೦೧ ಸಹಕಾರ ಸಂಘಗಳ ಪೈಕಿ ೯೬ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದ್ದು ಉಳಿದ ೫ ಸಂಘಗಳನ್ನು ಶೀಘ್ರದಲ್ಲಿಯೇ ಸ್ಥಾಪಿಸಲಾಗುವುದು. ಈ ೧೦೧ ಸಂಘಗಳಿಗೆ ಮತ್ತು ಸಂಘಗಳ ಒಕ್ಕೂಟಕ್ಕೆ ಸರ್ಕಾರದಿಂದ ಈ ರೀತಿ ಧನ ಸಹಾಯವನ್ನು ನೀಡಲು ಉದ್ದೇಶಿಸಿದೆ.

(೧) ಸಹಕಾರ ಸಂಘಗಳು
- (ಅ) ಆವರ್ತಕ ವೆಚ್ಚಗಳಿಗಾಗಿ (ವರ್ಕಿಂಗ್-ರೆಕರಿಂಗ್) ... ೧೫ ೧೫ ಲಕ್ಷ
- (ಆ) ಆವರ್ತಕ ವೆಚ್ಚಗಳಿಗಾಗಿ (ರೆಕರಿಂಗ್) ... ೪.೫೪ ಲಕ್ಷ

(೨) ಸಹಕಾರ ಸಂಘಗಳ ಒಕ್ಕೂಟ
- (ಅ) ಆವರ್ತಕ ವೆಚ್ಚಗಳಿಗಾಗಿ (ವರ್ಕಿಂಗ್-ರೆಕರಿಂಗ್) ೯.೩೦ ಲಕ್ಷ
- (ಆ) ಆವರ್ತಕ ವೆಚ್ಚಗಳಿಗಾಗಿ (ರೆಕರಿಂಗ್) ೧.೮೦ ಲಕ್ಷ

ತೋಟಗಾರಿಕೆ ಇಲಾಖೆಯಿಂದಲೂ ಈ ಸಲುವಾಗಿ ೪.೩ ಲಕ್ಷ ರೂ. ಗಳನ್ನು ಒಕ್ಕೂಟಕ್ಕೆ ನೀಡಲು ಉದ್ದೇಶಿಸಿದೆ.

೩. ಈ ಪೈಕಿ ೯೫ ಸಹಕಾರ ಸಂಘಗಳಿಗೆ ಸರ್ಕಾರ ಧನಸಹಾಯ ನೀಡಲು ೧೬.೧೫ ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿರುತ್ತದೆ. ಸಹಕಾರ ಸಂಘಗಳ ಒಕ್ಕೂಟದ ಕಾರ್ಯಕ್ರಮಗಳು ಇನ್ನೂ ಆರಂಭವಾಗಬೇಕಾಗಿರುವುದರಿಂದ, ಒಕ್ಕೂಟಕ್ಕೆ ಧನಸಹಾಯವನ್ನು ಒದಗಿಸಲಾಗಿಲ್ಲ.

೪. ಈ ಯೋಜನೆಗೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ (ನಾನ್.ಡಿ.ಸಿ.) ನಿಗಮದಿಂದಲೂ ಸಹಾಯ ಪಡೆಯಲು ಉದ್ದೇಶಿಸಲಾಗಿದೆ. ಈ ಬಗ್ಗೆ ವ್ಯವಹಾರ ನಡೆದಿದ್ದು ಖಚಿತವಾದ ತೀರ್ಮಾನ ಬರಬೇಕಾಗಿದೆ.

೫. ಸಹಕಾರ ಸಂಘಗಳ ಒಕ್ಕೂಟವು ರಿಜಿಸ್ಟರಾಗಿದ್ದು ಇದರ ಆಡಳಿತ ಮಂಡಳಿಯನ್ನು ನೇಮಕ ಮಾಡುವ ವಿಚಾರವು ಸರಕಾರದ ಪರಿಶೀಲನೆಯಲ್ಲಿದೆ. ಶೀಘ್ರದಲ್ಲಿಯೇ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಮತ್ತು ರೈತರಿಗೆ ಉದ್ದೇಶಿತ ಸೌಲಭ್ಯಗಳನ್ನು ಒದಗಿಸುವ ಕಾರ್ಯವನ್ನು ಕೈಗೊಳ್ಳಲಾಗುವುದು.

೬. ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ಹಣ್ಣು ಮತ್ತು ತರಕಾರಿ ಬೆಳೆಗಾರರ ಸಭೆಯು ದಿನಾಂಕ ೧೫-೪-೮೦ರಂದು ತೋಟಗಾರಿಕೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಎಲ್ಲಾ ವಿಷಯಗಳನ್ನೂ ಸವಿಸ್ತಾರವಾಗಿ ಚರ್ಚಿಸಲಾಯಿತು. ಮಧ್ಯವರ್ತಿಗಳಿಂದ ಹಣ್ಣು ಮತ್ತು ತರಕಾರಿ ಬೆಳೆ

ಗಾರರ ಹಾಗೂ ಗ್ರಾಹಕರ ಶೋಷಣೆಯನ್ನು ತಪ್ಪಿಸಲು ಹೆಚ್ಚು ಪರಿಣಾಮಕಾರಿಯಾಗಿರುವ ''ಹಣ್ಣು ಮತ್ತು ತರಕಾರಿ ಮಂಡಳಿಯನ್ನು'' ಸ್ಥಾಪಿಸುವ ಸಾಧ್ಯತೆಯನ್ನೂ ಪರಿಶೀಲಿಸಲಾಗುತ್ತಿದೆ. ಆದ್ದರಿಂದ ಹಣ್ಣು ಮತ್ತು ತರಕಾರಿ ಬೆಳೆಗಾರರ ಸಂಘಗಳ ಒಕ್ಕೂಟದ ಸ್ಥಾಪನೆಯನ್ನು ಅಂತಿಮವಾಗಿ ನಿರ್ಧರಿಸಿರುವುದಿಲ್ಲ.

ಶ್ರೀ ಪಿ. ಎನ್. ರೆಡ್ಡಿ —ಸ್ವಾಮಿ, ಮಾನ್ಯ ಮಂತ್ರಿಯವರು ಈ ಸಭೆಗೆ ಒಂದು ವರದಿಯನ್ನು ಒಪ್ಪಿಸಿದರು. ನಮ್ಮ ಮಾನ್ಯ ತೋಟಗಾರಿಕೆ ಮಂತ್ರಿಯವರು ರೈತರ ಮೇಲೆ ಅನುಕಂಪ ಇದೆಯೆಂದು ಹೇಳಿದರು. ಈ ವರದಿಯಲ್ಲಿ ಹೇಳಿರುವುದನ್ನು ನೋಡಿದರೆ ರೈತರ ಬಗ್ಗೆ ಹೆಚ್ಚು ಹೆಚ್ಚಾಗಿ ಗಮನ ಕೊಡುತ್ತಾ ಇಲ್ಲ ಎಂದು ಸಮಾಧಾನಿಸುತ್ತಿದೆ ರೈತರಿಗೆ ೧೦, ೧೦ ರೂಪಾಯಿಗಳ ಷೇರನ್ನು ಒದಗಿಸುವುದೇ ಕಷ್ಟ ಅಂಥಾದರಲ್ಲೂ ಕೂಡ ಸುಮಾರು ೭–೮ ತಿಂಗಳುಗಳ ಹಿಂದೆ ರೈತರೆಲ್ಲರೂ ಸೇರಿ ಸುಮಾರು ೬೫ ಲಕ್ಷ ರೂಪಾಯಿಗಳ ಷೇರನ್ನು ಕೊಟ್ಟಿದ್ದಾರೆ ಈ ಸೊಸೈಟಿಗಳನ್ನು ಮಾಡಿದಿಂದ ಅವುಗಳಿಂದ ರೈತರಿಗೆ, ಬೆಳೆಗಾರರಿಗೆ ಅನುಕೂಲವಾಗುತ್ತದೆ, ಯಾವುದೇ ಬೆಳೆದಂಥ ತರಕಾರಿ ಮತ್ತು ಹಣ್ಣುಗಳು ವಿಲೇವಾರಿಯಾಗುತ್ತದೆ, ಸರ್ಕಾರದವರು ಅದನ್ನು ನಿಗದಿಯಾದ ಬೆಲೆಗೆ ತೆಗೆದುಕೊಳ್ಳುತ್ತಾರೆ ಎನ್ನುತಕ್ಕಂಥ ಭಾವನೆಯಿಂದ ರೈತರು ಮತ್ತು ಬೆಳೆಗಾರರೆಲ್ಲರೂ ಸಂಘಕ್ಕೆ ಸದಸ್ಯರಾದರು. ಇಂತಹ ಒಂದು ಪರಿಸ್ಥಿತಿಯಲ್ಲಿ ೧೦೧ ಸೊಸೈಟಿಗಳಲ್ಲಿ ೯೬ ಸೊಸೈಟಿಗಳು ರಿಜಿಸ್ಟರ್ ಆಗಿದೆ. ಈ ಸೊಸೈಟಿಗಳ ಯೂನಿಯನ್ ಏನಿದೆ ಅದನ್ನೂ ಕೂಡ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ಅಲ್ಲಿ ಒಬ್ಬರು ಚೇರ್ಮನ್ನರ ನೇಮಕವೂ ಆಗಿದೆ. ಸಹಕಾರಸಂಘಗಳಿಂದ ಎಷ್ಟು ಷೇರು ಕೊಡಬೇಕೋ ಅಷ್ಟನ್ನೂ ಕೂಡ ಕೊಟ್ಟು ಆಗಿದೆ. ಈಗ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಿಂದ ಅಲ್ಲಿಗೆ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್ ನೇಮಕ ಆಗಬೇಕಾಗಿದೆ. ಇದನ್ನು ಮಾಡುವುದಕ್ಕೆ ಎಷ್ಟು ವರ್ಷ ಬೇಕೋ ಗೊತ್ತಿಲ್ಲ. ಸಹಕಾರ ಇಲಾಖೆಯಿಂದ ೩.೪ ಲಕ್ಷ ರೂಪಾಯಿಗಳಷ್ಟು ಷೇರು ಹಣವನ್ನು ಅವರು ಕಟ್ಟಿಬಿಟ್ಟಿದ್ದಾರೆ. ಇಷ್ಟಾದರೂ ಸಹ ರೈತರಿಗೆ ಮತ್ತು ಬೆಳೆಗಾರರಿಗೆ ಯಾವ ಒಂದು ಸ್ಯಾಯೋಜನವೂ ಆಗಿಲ್ಲ. ಈ ಬಗ್ಗೆ ರೈತರಿಗೆ ಧರಣಿ ಮಾಡುವುದಕ್ಕೂ ಗೊತ್ತಿಲ್ಲ. ಏಕೆಂದರೆ ರೈತರು ಮುಗ್ಧಜೀವಿಗಳು. ತಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳಲು ಕಾರ್ಮಿಕರು ಯಾರಾದರೂ ಧರಣಿ ಮಾಡಿದರೆ ತಕ್ಷಣ ತಾವು ಅವರ ಸಮಸ್ಯೆಯನ್ನು ಅರಿತುಕೊಂಡು ಅದನ್ನು ಪರಿಹಾರ ಮಾಡುತ್ತೀರಿ. ತಾವು ಮಿತಕ್ಕೆ ರೈತರ ಮತ್ತು ಬೆಳೆಗಾರರ ಬೇಡಿಕೆಯನ್ನು ಈಡೇರಿಸುತ್ತಾ ಇಲ್ಲ? ರೈತರು ಅವರು ಬೆಳೆದ ತರಕಾರಿ ಮತ್ತು ಹಣ್ಣುಗಳನ್ನು ಮಾರಾಟ ಮಾಡಲು ಅನುಕೂಲವಾಗುವಂತೆ ಅವರಿಗೆ ಟ್ರಾನ್ಸ್‌ಪೋರ್ಟ್ ಸೌಲಭ್ಯವನ್ನು ಒದಗಿಸಿದರೆ ಅವರಿಗೆ ಎಷ್ಟೋ ಹಣ ಉಳಿತಾಯವಾಗುತ್ತದೆ, ಈ ಸೌಲಭ್ಯವನ್ನು ಕೊಟ್ಟಿಲ್ಲ ಇನ್ನು ಅವರು ಬೆಳೆದಂಥ ಹಣ್ಣು ಮತ್ತು ತರಕಾರಿಗಳಿಗೆ ಒಂದು ನಿಗಧಿಯಾದ ಬೆಲೆ ಸಿಕ್ಕುತ್ತದೆ ಎಂದರೆ ಅದೂ ಕೂಡ ಸಿಕ್ಕುತ್ತಾ ಇಲ್ಲ. ಈ ತರಹ ಮಾಡಿದರೆ ಹೇಗೆ ?

ಅಧ್ಯಕ್ಷರು.—ಮಾನ್ಯ ರೆಡ್ಡಿಯವರೇ, ನೀವು ಯಾವ ವಿಚಾರದಲ್ಲಿ ಸ್ಪಷ್ಟೀಕರಣ ಕೇಳಬೇಕೆಂದಿದ್ದೀರೂ ಅದನ್ನು ಕೇಳಿ.

ಶ್ರೀ ಪಿ. ಎನ್. ರೆಡ್ಡಿ.—ಸ್ವಾಮಿ, ಮಾನ್ಯ ಮಂತ್ರಿಯವರು ತಮ್ಮ ವರದಿಯಲ್ಲಿ ಈಗಾಗಲೇ ೧೦೧ ಸಹಕಾರ ಸಂಘಗಳಲ್ಲಿ ೯೬ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ, ಇನ್ನುಳಿದ ೫ ಸಹಕಾರ ಸಂಘಗಳನ್ನು ಸ್ಥಾಪಿಸಲಾಗುವುದು ಎಂದು ಹೇಳಿದ್ದಾರೆ. ಹೀಗೆ ಇದರಲ್ಲಿ ಹೆಚ್ಚು ಡಿಲೇ ಮಾಡುವುದರಿಂದ ರೈತರಿಗೆ ಮತ್ತು ಬೆಳೆಗಾರರಿಗೆ ಅನಾನುಕೂಲವಾಗುತ್ತದೆ. ಇನ್ನು ೧೫ ದಿವಸದಲ್ಲಿ ಆ ಸಹಕಾರ ಸಂಘಗಳನ್ನು ಸಾ ಪನೆ ಮಾಡುತ್ತಾರೆಯೆ ಎಂದು ಕೇಳುತ್ತೇನೆ. ಸಹಕಾರ ಸಂಘಗಳ ಯೂನಿಯನ್ ಈಗ ರಿಜಿಸ್ಟರ್ ಆಗಿದೆ. ನಿಮ್ಮ ಇಲಾಖೆಯಿಂದ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರನ್ನು ಅಲ್ಲಿ ನೇಮಕ ಮಾಡಬೇಕಾಗಿದೆ. ಅವರನ್ನು ಅಲ್ಲಿ ಹಾಕಿ ೪ ಲಕ್ಷ ರೂಪಾಯಿಗಳ ಷೇರು ಬಂಡವಾಳದೊಂದಿಗೆ ಅದಷ್ಟು ಜಾಗ್ರತೆಯಾಗಿ ಸೊಸೈಟಿಗಳನ್ನು ನಡೆಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ? ರೈತರು ಅಲ್ಲಿ ಬಿಲ್ಡಿಂಗ್ ಬಾಡಿಗೆಯನ್ನು ಕಟ್ಟುತ್ತಿದ್ದಾರೆ ೮–೯ ತಿಂಗಳಿನಿಂದ ಬಾಡಿಗೆಯನ್ನು ಕಟ್ಟುತ್ತಿದ್ದಾರೆ ಇದನ್ನು ಸರ್ಕಾರದವರೇ ಭರಿಸುತ್ತಾರೆಯೇ? ಇದನ್ನೆಲ್ಲಾ ಇನ್ನು ೧೫ ದಿವಸದಲ್ಲಿ ಸರಿಪಡಿಸುತ್ತೀರಾ ಹೇಗೆ ತಿಳಿಸಿ.

ಶ್ರೀ ಡಿ. ಟಿ. ರಾಮು —ಸ್ವಾಮಿ, ಇಲ್ಲಿರತಕ್ಕಂಥ ಪ್ರಶ್ನೆ ಏನೆಂದರೆ ಬಡರೈತರನ್ನು, ತರಕಾರಿ ಹಾಗೂ ಹಣ್ಣುಗಳಬೆಳೆಗಾರರನ್ನು, ಬುದ್ಧಿವಂತರಾದ ಮಧ್ಯವರ್ತಿ ಜನಗಳ ಶೋಷಣೆಯಿಂದ ವಿಮುಕ್ತಿ

ಗೊಳಿಸತಕ್ಕಂಥಾದ್ದು ಹೇಗೆ ಎನ್ನತಕ್ಕಂಥ ಪ್ರಶ್ನೆ ಇದೆ. ಇವತ್ತು ಏನೊಂದು ಪರಿಸ್ಥಿತಿ ಇದೆ ಎಂದರೆ ರೈತರುಬಹಳ ಕಷ್ಟಪಟ್ಟು ಏನನ್ನು ಬೆಳೆಯುತ್ತಾರೆಯೋ ಅದನ್ನು ಬೆಂಗಳೂರಿಗೆತೆ ಗೆದುಕೊಂಡು ಬಂದಾಗ ಅವರಿಗೆ ಸರಿಯಾದ ಬೆಲೆ ದೊರೆಯುತ್ತಾ ಇಲ್ಲ. ಅವರಿಗೆ ಸರಿಯಾದ ಬೆಲೆ ಏತಕ್ಕೆ ದೊರೆಯುತ್ತಿಲ್ಲವೆಂದರೆ ದಳ್ಳಾಳಿಗಳು ಮಧ್ಯ ಪ್ರವೇಶ ಮಾಡುವುದರಿಂದ ಅವರಿಗೆ ಸರಿಯಾದ ಬೆಲೆ ಏನು ದೊರೆಯಬೇಕೋ ಅದು ದೊರೆಯುತ್ತಾ ಇಲ್ಲ. ಇದರಿಂದ ಒಂದು ಕಡೆ ರೈತರಿಗೆ ತೊಂದರೆಯಾಗುತ್ತಿದೆ. ಇನೊಂದು ಕಡೆ ಗ್ರಾಹಕರಿಗೂ ತೊಂದರೆಯಾಗುತ್ತಿದೆ. ಈ ತೊಂದರೆಯನ್ನು ತಪ್ಪಿಸುವ ಕಾರಣದಿಂದ ೯೬ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ ಅದಕ್ಕೆ ಸಾಕಷ್ಟು ಷೇರು ಬಂಡವಾಳವನ್ನು ಒದಗಿಸಲಾಗಿದೆ. ಇನ್ನೂ ೫೫ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಲು ಸರ್ಕಾರ ಒಪ್ಪಿಕೊಂಡಿದೆ. ಈ ಮಧ್ಯ ನಮ್ಮ ಮಾನ್ಯ ತೋಟಗಾರಿಕೆ ಸಚಿವರು ತರಕಾರಿ ಮತ್ತು ಹಣ್ಣುಗಳ ಮಂಡಲಿಯನ್ನು ರಚಿಸಬೇಕೆಂಬುದರ ಬಗ್ಗೆ ನಮ್ಮೆಲ್ಲರನ್ನೂ ಕರೆದು ಚರ್ಚೆ ಮಾಡಿದ್ದಾರೆ. ಇದು ಬಹಳ ಸ್ವಾಗತಾರ್ಹವಾದ ವಿಚಾರ. ಈ ಮಂಡಲಿ ಅಸ್ತಿತ್ವಕ್ಕೆ ಬಂದು ಅದಕ್ಕೆ ಬೇಕಾದಂಥ ಶೈತ್ಯಾಗಾರ ಮತ್ತು ಇನ್ನಿತರ ಸೌಕರ್ಯಗಳನ್ನು ಒದಗಿಸಿಕೊಡ ಬೇಕಾದರೆ ಕನಿಷ್ಟಪಕ್ಷ ೨ ವರ್ಷ ಬೇಕಾಗುತ್ತದೆ. ಈ ಕಾರಣದಿಂದ ನಡೆಯಬೇಕಾದಂಥ ಕೆಲಸಗಳು ನಿಲ್ಲುವುದು ಬೇಡ. ಈಗ ಉಳಿದಿರತಕ್ಕಂಥ ಸೊಸೈಟಿಗಳು ಏನಿವೆ ಅವಕ್ಕೂ ಪರವಾನಗಿಯನ್ನು ಕೊಟ್ಟುಬಿಡಿ. ಈ ಮಂಡಲಿ ಸಂಪೂರ್ಣವಾಗಿ ಅಸ್ತಿತ್ವಕ್ಕೆ ಬಂದಾಗ ಈ ಸೊಸೈಟಿಗಳನ್ನೆಲ್ಲಾ ಅದರಲ್ಲಿ ಸೇರಿಸಿಕೊಂಡು ಈ ಮಂಡಲಿಗೆ ಬೇಕಾದಂಥ ವ್ಯವಸ್ಥೆಗಳನ್ನು ಮಾಡಿ ರೈತರಿಗೆ ಅನುಕೂಲ ಮಾಡಿಕೊಡಿ.

ಶ್ರೀ ಪಿ. ಎಂ.

ಸೊಸೈಟಿಗಳಿಗೆ ಛೇರ್ಮನ್ ಮಾಡಿದ್ದೀರಿ, ಷೇರು ಬಂಡವಾಳ ಇದೆ, ಆದರೆ ಮ್ಯಾನೇಜಿಂಗ್ ಡೈರೆಕ್ಟರನ್ನು ಕೊಟ್ಟಿಲ್ಲ ಆದ್ದರಿಂದ ಮ್ಯಾನೇಜಿಂಗ್ ಡೈರೆಕ್ಟರನ್ನು ಕೊಟ್ಟು ರೈತರನ್ನು ಶೋಷಣೆಯಿಂದ ವಿಮುಕ್ತಗೊಳಿಸಲಿ. ಮಂಡಲಿಯಲ್ಲಿ ಇವರನ್ನು ಮೆಂಬರಾಗಿ ಆಳವಡಿಸಿಕೊಂಡು ಒಂದು ಸುವ್ಯವಸ್ಥಿತ ವಾಗಿ ಮಾಡಬಹುದು ಎನ್ನತಕ್ಕ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ, ಮಾನ್ಯ ಸಚಿವರು ಇದರ ಬಗ್ಗೆ ಶೀಘ್ರ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಪಾಟೀಲ್.—ಈ ಸಮಸ್ಯೆ ಕೇವಲ ಬೆಂಗಳೂರು ಮತ್ತು ಕೋಲಾರದಲ್ಲಿ ಮಾತ್ರ ವಲ್ಲ ಗುಲ್‌ಬರ್ಗದಲ್ಲೂ ಇದೆ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಸರ್ಕಾರದ ಉದ್ದೇಶ ಒಳ್ಳೆಯದು. ಆದರೆ ಅದನ್ನು ಕೊಳೆಯುವುದಕ್ಕೆ ಬಿಟ್ಟಿದ್ದಾರೆ. ತರಕಾರಿ, ಹಣ್ಣುಗಳು ಹೇಗೆ ಕೊಳೆಯುತ್ತವೋ ಹಾಗೆ ಇದನ್ನು ಸರ್ಕಾರ ಕೊಳೆಯುವುದಕ್ಕೆ ಬಿಟ್ಟಿದೆ. ಇದಕ್ಕೆ ಒಂದು ಮುಂಡಲಿ ಬೇಕು. ರೈತ್ಯೆ ಇಲಾಖೆಯಲ್ಲಿ ದಲ್ಲಾಳಿಗಳ ಕೈಯಿಂದ ರೈತರನ್ನು ಹೇಗೆ ಬಿಡುಗಡೆ ಮಾಡಿದ್ದಾರೊ ಹಾಗೆ ತೋಟಗಾರಿಕೆ ಇಲಾಖೆಯಲ್ಲೂ ಕೂಡ ದಲ್ಲಾಳಿಗಳಿಂದ ರೈತರನ್ನು ವಿಮುಕ್ತಗೊಳಿಸಲಿಕ್ಕೆ ಏನು ತೊಂದರೆಯಿದೆ ?

ಶ್ರೀ ಕೆ. ಯಂಕಟಪ್ಪ.—ಶ್ರೀಮಾನ್ ಪಿ. ಎನ್. ರೆಡ್ಡಿಯವರು ೯೫ ಸಹಕಾರ ಸಂಘಗಳು ರಿಜಿಸ್ಟರಾಗಿವೆ, ಇನ್ನು ೬ ಸೊಸೈಟಿಗಳು ಉಳಿದಿವೆ. ಉಳಿದಿರತಕ್ಕ ೬ ಸೊಸೈಟಿಗಳೂ ಸಹ ರಿಜಿಸ್ಟರ್ ಆಗ ಬಹುದು ಎಂದು ಹೇಳಿದರು. ನಾನು ದಿನಾಂಕ ೧೫-೪-೧೯೮೦ರಲ್ಲಿ ಸಭೆ ಕರೆದಾಗ ಸಹಕಾರ ಸಂಘವನ್ನು ಮಾಡಬೇಡಿ ಮಧ್ಯವರ್ತಿಗಳಾದವರು ಎರಡು ಸಾವಿರ ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದಾರೆ. ನನ್ನ ದೃಷ್ಟಿಯಲ್ಲಿ ಏನಿತ್ತು ಅಂದರೆ, ಇದಕ್ಕೆ ಬೇರೆ ರೂಪವನ್ನು ಹುಡುಕಬೇಕು. ಅಂದರೆ ಅಲ್ಲಿ ವ್ಯಾಪಾರಸ್ಥರು ಮತ್ತು ಸಹಕಾರ ಸಂಘಗಳಲ್ಲಿರತಕ್ಕವರು ವ್ಯವಹಾರದಲ್ಲಿ ಕೈವಾಡಮಾಡಿ ರೈತನಿಗೆ ಅನ್ಯಾಯವಾಗುವುದನ್ನು ತಡೆಗಟ್ಟಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಈ ಗಮನ ಸೆಳೆಯುವ ಸೂಚನೆ ಬರುವುದಕ್ಕೆ ಮುಂಚಿತವಾಗಿ ೩ ಗಂಟೆಯಿಂದ ೫ ಗಂಟೆಯವರೆಗೆ ಮುಖ್ಯ ಕಾರ್ಯದರ್ಶಿಗಳು, ಡೆವಲಪ್ ಕಮಿಷನವರು, ಅಗ್ರಿಕಲ್ಚರಲ್ ಕಮಿಷನರು ಕೊ ಆಪರೇಟೀವ್ ಕಮಿಷನರು, ಪ್ಲಾನಿಂಗ್ ಕಮಿಷನರ್ ವರು ಮತ್ತು ನಮ್ಮ ಇಲಾಖೆಯವರೂ ಸೇರಿ ಮಾತನಾಡಿದ್ದೇವೆ. ಇದರ ಬಗ್ಗೆ ಯಾವರೀತಿ ರೂಪುರೇಷೆಗಳನ್ನು ಹಾಕಿಕೊಡಬೇಕು, ರೈತರನ್ನು ಮಧ್ಯವರ್ತಿಗಳಿಂದ ಮತ್ತು ವ್ಯಾಪಾರಸ್ಥರಿಂದ ತಪ್ಪಿಸಿ ರೈತರಿಗೂ ಗ್ರಾಹಕರಿಗೂ ಅನುಕೂಲ ಮಾಡಿಕೊಡಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಿದ್ದೇವೆ. ಸಹಕಾರ ಸಂಘಗಳ ಮೂಲಕ ಮಾಡುವುದರಲ್ಲಿ ನಮ್ಮ ಅಭ್ಯಂತರವಿಲ್ಲ. ಮಾನ್ಯ ಡಿ. ಟಿ. ರಾಮು

ಅವರು ಹೇಳಿದಹಾಗೆ ಕಾರ್ಪೊರೇಷನ್‌ಗಳನ್ನು ಮಾಡುವುದಕ್ಕೆ ಅಭ್ಯಂತರವಿಲ್ಲ. ಸಹಕಾರ ಸಂಘದಿಂದ ಇಷ್ಟು ಹಣ, ತೋಟಗಾರಿಕೆ ಇಲಾಖೆಯಿಂದ ಇಷ್ಟು ಹಣ ಕೊಟ್ಟು ಸಹಾಯ ಮಾಡಬೇಕು ಎಂದು ಇದೆ. ಇನ್ನು ೧೫ ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ೧೫ ದಿವಸ ಅಲ್ಲ, ಬಹಳ ತೀವ್ರಗತಿಯಲ್ಲಿ ಕ್ರಮತೆಗೆದುಕೊಳ್ಳಬೇಕು ಎಂದು ನನಗೆ ಆಸೆ ಇದೆ. ೧೫ ದಿವಸ ಎಂದು ನಿಗದಿಯಾಗಿ ಹೇಳುವುದಕ್ಕಿಂತ ಹೆಚ್ಚಿನ ತೀವ್ರಗತಿಯಲ್ಲಿ ಕಾರ್ಯಕ್ರಮ ತೆಗೆದುಕೊಂಡು ರಾಜ್ಯದಲ್ಲಿ ರೈತರಿಗೆ ಅವಶ್ಯಕವಾಗಿ ಮಾಡಬೇಕಾದ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಸರ್ಕಾರಕ್ಕೆ ಪೂರ್ಣವಾದ ಮನಸ್ಸಿದೆ. ಇದರ ಬಗ್ಗೆ ಗುಲ್ಬರ್ಗ ಶಾಸಕರೂ ಕೂಡ ಕೇಳಿದ್ದಾರೆ. ಕೋಲಾರ ಮತ್ತು ಬೆಂಗಳೂರು ಮಾತ್ರವಲ್ಲ ರಾಜ್ಯವ್ಯಾಪ್ತಿ ಇದೆಯೆಂದು ಕೇಳಿದ್ದೇನೆ. ಕೋಲಾರ ಮತ್ತು ಬೆಂಗಳೂರಿನಲ್ಲಿರುವಂತೆ ಉಳಿದ ಭಾಗಗಳಲ್ಲೂ ಈ ಒಂದು ಪರಿಸ್ಥಿತಿ ಇದೆ. ನಿಮ್ಮನ್ನು ಕರೆಸಿ ಇದರ ಬಗ್ಗೆ ಮಾತನಾಡುತ್ತೇನೆ. ಸೋಮವಾರ ತಮ್ಮನ್ನು ಕರೆಸುತ್ತೇನೆ. ಬೆಂಗಳೂರಿನ ಶಾಸಕರನ್ನೂ ಕರೆಸುತ್ತೇನೆ. ಸಮಸ್ಯೆಗಳನ್ನು ಯಾವರೀತಿ ಬಗೆಹರಿಸಬೇಕು, ತಕ್ಷಣದಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ಉದ್ದೇಶ ತೀವ್ರಗತಿಯಲ್ಲಿದೆ. ಇದರ ಬಗ್ಗೆ ೧೫ ದಿವಸಗಳಲ್ಲಿ ತೀರ್ಮಾನ ತೆಗೆದುಕೊಳ್ಳಬಹುದು. ಅಥವಾ ಒಂದು ತಿಂಗಳೊಳಗಾಗಿ ಅಂತಿಮವಾಗಿರತಕ್ಕ ನಿಲುವನ್ನು ತಾಳಬಹುದು. ಕೋಲಾರ ಮತ್ತು ಬೆಂಗಳೂರು ರೈತರ ಹಿಂದೆ ಎಲ್ಲಾ ೧೦ ಪೈಸೆ ತರಕಾರಿ ಕೊಟ್ಟಿದ್ದೀರಿ ನನಗೆ ಒಂದು ತಿಂಗಳು ಟೈಂ ಕೊಡಿ. ಅಷ್ಟರೊಳಗೆ ವಿಚಾರಮಾಡಿ ರೈತರಿಗೆ ಅನುಕೂಲವಾಗುವ ಸವಲತ್ತನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

MR. SPEAKER :—Now, the House stands adjourned to meet again tomorrow at 9-00 a. m.

The House adjourned at Five Minutes past Seven of the Clock to meet again at Nine of the Clock on Wednesday, the 18th June, 1980.